ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು)

ಅ) ಬಂದಿರುವುದಿಲ್ಲ.

ಆ) 5 ಎಕರೆ 16 ಗುಂಟೆ ಜಮೀನನ್ನು ಕ್ರೀಡಾಂಗಣಕ್ಕಾಗಿ ಕಾಯ್ದಿರಿಸಲು ಪ್ರಸ್ತಾವನೆ ಬಂದಿತ್ತು. ಈ ಪ್ರಸ್ತಾವನೆಗೆ ಸರ್ಕಾರದ ಪತ್ರ ಸಂ: ಕಂಈ:106 ಎಲ್‌ಬಿಟಿ 98, ದಿ: 30.1.2001ರಲ್ಲಿ ಸರ್ಕಾರದ ಅನುಮತಿ ನೀಡಲಾಗಿದೆ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಕೂಲಿಗಾಗಿ ಕಾಳು ಯೋಜನೆ

1789 (1803) ಶ್ರೀ ನಾರಾಯಣಸ್ವಾಮಿ ಎ (ಆನೇಕಲ್) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿ ರಾಜ್ಯಕ್ಕೆ 2002-03ನೇ ಸಾಲಿನಲ್ಲಿ ಕೇಂದ್ರ ಬಿಡುಗಡೆ ಮಾಡಿದ ಆಹಾರಧಾನ್ಯ ಎಷ್ಟು?

ಆ) ಈ ಆಹಾರಧಾನ್ಯವನ್ನು ಎಷ್ಟು ಬಿಡುಗಡೆ ಮಾಡಲಾಗಿದೆ? (ತಾಲ್ಲೂಕುವಾರು ಮಾಹಿತಿ ನೀಡುವುದು)

ಇ) ವಿತರಣೆಯಾಗಬೇಕಾಗಿರುವ ಆಹಾರಧಾನ್ಯಗಳು ಎಷ್ಟು?

ಶ್ರೀ ಎಂ. ಮಲ್ಲಿಕಾರ್ಜುನನಾಗಪ್ಪ (ಕಂದಾಯ ರಾಜ್ಯ ಸಚಿವರು)

ಅ) ಇದುವರೆಗೆ ಒಟ್ಟು 365000 ಟನ್ ಅಕ್ಕಿಯನ್ನು ಬಿಡುಗಡೆ ಮಾಡಿದೆ.

ಆ) ಕೇಂದ್ರ ಸರ್ಕಾರವು ಬಿಡುಗಡೆ ಮಾಡಿದ ಎಲ್ಲಾ 365000 ಟನ್ ಅಕ್ಕಿಯನ್ನು ಜಿಲ್ಲೆಗಳಿಗೆ ಹಂಚಲಾಗಿದೆ. ಸರ್ಕಾರವು ತಾಲ್ಲೂಕುವಾರು ಆಹಾರಧಾನ್ಯ ಬಿಡುಗಡೆ ಮಾಡಿರುವುದಿಲ್ಲ.

ಇ) ಸುಮಾರು 49000 ಟನ್ ಅಕ್ಕಿ ವಿತರಣೆಯಾಗಲು ಬಾಕಿ ಇದೆ.

ಹುಣಸೂರು ತಾಲ್ಲೂಕಿನಲ್ಲಿ ರಾಷ್ಟ್ರೀಯ ಭದ್ರತಾ ಯೋಜನೆ ಹಣ ಬಿಡುಗಡೆ

1790 (2400) ಶ್ರೀ ಪಾಪಣ್ಣ ವಿ. (ಹುಣಸೂರು) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಣಸೂರು ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ರಾಷ್ಟ್ರೀಯ ಭದ್ರತಾ ಯೋಜನೆಯಲ್ಲಿ ಎಷ್ಟು ಮಂದಿಗೆ ಹಣ ಮಂಜೂರು ಮಾಡಲಾಗಿದೆ (ವಿವರ ಒದಗಿಸುವುದು);

ಆ) ಬಾಕಿ ಎಷ್ಟು ಮಂದಿಗೆ ಕೊಡಬೇಕಾಗಿದೆ; ಯಾವಾಗ ಹಣ ನೀಡಲಾಗುವುದು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು)

ಅ) ಹುಣಸೂರು ತಾಲ್ಲೂಕಿನಲ್ಲಿ ರಾಷ್ಟ್ರೀಯ ಭದ್ರತಾ ಯೋಜನೆಯಲ್ಲಿ ಪರಿಹಾರ ಮಂಜೂರು ಮಾಡಿರುವ ಫಲಾನುಭವಿಗಳ ವಿವರ ಈ ಕೆಳಗಿನಂತಿದೆ.

	ಪರಿಹಾರ ವಿತರಿಸಿರುವ ಮೊಬಲಗು	ಫಲಾನುಭವಿಗಳ ಸಂಖ್ಯೆ
1.	2000-01 ರೂ. 9,50,000.00	95
2.	2001-02 ರೂ. 3,00,000.00	30
3.	2002-03 ರೂ. 50,000.00	5